## 1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಕಡೂರು

## ಸಿ.ಸಿ. ನಂಬರು 2537/2025

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಈಶ್ವರಪ್ಪ | ಚಾಸಾ.2 |
| ತಂದೆಯ ಹೆಸರು | : | ನಿಂಗಪ್ಪ | ಫ್ರಾಸಾ.2 |
| ವಯಸ್ಸು | : | 42 ವರ್ಷ | |
| ವೃತ್ತಿ | : | ವ್ಯವಸಾಯ | |
| ವಾಸಸ್ಥಳ | : | ಪಿ.ಕೋಡಿಹಳ್ಳಿ, ಕಡೂರು | |

**ದಿನಾಂಕ 21.11.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ :ಮಾನ್ಯ ಎ.ಪಿ.ಪಿ. ರವರಿಂದ :-**

ಆರೋಪಿಯ ಪರಿಚಯ ಇರುವುದಿಲ್ಲ. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ಪೊಲೀಸರು ನನಗೆ ಯಾವುದೇ ನೋಟೀಸನ್ನು ನೀಡಿರುವುದಿಲ್ಲ. ಸಾಕ್ಷಿಯು ನಿಪಿ.1 ರ ನೋಟೀಸಿನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ.1 ಬಿ ಎಂದು ಗುರುತಿಸಲಾಯಿತು. ಸದರಿ ನೋಟೀಸಿನಲ್ಲಿ ಏನು ಬರೆದಿರುತ್ತದೆ, ಎಲ್ಲಿ, ಯಾವಾಗ ಸಹಿ ಮಾಡಿರುತ್ತೇನೆ ಎಂದು ನನಗೆ ಗೊತ್ತಿಲ್ಲ.

ನನ್ನ ಮುಂದೆ ಪೋಲೀಸರು ಯಾವುದೇ ಸ್ಥಳ ಮಹಜರನ್ನು ಜರುಗಿಸಿರುವುದಿಲ್ಲ. ಸಾಕ್ಷಿಯು ನಿಪಿ.2 ರ ಮಹರಿಜನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ.2 ಬಿ ಎಂದು ಗುರುತಿಸಲಾಯಿತು. ಸದರಿ ನಿಪಿ.2 ರ ಮಹಜರಿಗೆ ಎಲ್ಲಿ, ಯಾವಾಗ ಸಹಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಿಪಿ.2 ರಲ್ಲಿ ಬರೆದ ವಿಚಾರ ನನಗೆ ಗೊತ್ತಿಲ್ಲ.

ಸಾಕ್ಷಿಯು ನಿಪಿ.3ರ ಛಾಯಾಚಿತ್ರದಲ್ಲಿ ತಾನು ಇರುವುದಾಗಿ ನೋಡಿ ಗುರುತಿಸಿದ್ದು, ಅದನ್ನು ಯಾವಾಗ, ಎಲ್ಲಿ ತೆಗೆದಿರುತ್ತಾರೆ ಎಂದು ಗೊತ್ತಿಲ್ಲ. ಮಹಜರು ಸಮಯದಲ್ಲಿ ನನ್ನ ಮುಂದೆ ಪೊಲೀಸರು ಯಾವುದೇ ಮುದ್ದೆಮಾಲನ್ನು ವಶಪಡಿಸಿಕೊಂಡಿರುವುದಿಲ್ಲ. ಮು.ಮಾ–1ರ ಮೇಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ಮು.ಮಾ–1ಬಿ ಎಂದು ಗುರುತಿಸಲಾಯಿತು. ಸದರಿ ಮುದ್ದೆಮಾಲನ್ನು ಎಲ್ಲಿ, ಯಾವಾಗ ವಶಪಡಿಸಿಕೊಂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಪೊಲೀಸರಿಗೆ ನಾನು ಈ ಬಗ್ಗೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಎಪಿಪಿಯವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು , ಅನುಮತಿ ನೀಡಲಾಗಿದೆ)

**ಪಾಟೀ ಸವಾಲು :– ಮಾನ್ಯ ಎಪಿಪಿಯವರಿಂದ :–**

ದಿನಾಂಕ 20.05.2025ರಂದು ಪೊಲೀಸರು ದಾಳಿಯ ವಿಚಾರವನ್ನು ತಿಳಿಸಿ ದಾಳಿಗೆ ಸಹಕರಿಸುವಂತೆ ಕೋರಿ ನನಗೂ ಮತ್ತು ಚಾಸಾ–3ರವರಿಗು ನಿಪಿ.1ರಂತೆ ಚಾಸಾ–1ರವರು ನೋಟೀಸನ್ನು ಜಾರಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಅದೇ ದಿನ ನಿಪಿ.2ರಂತೆ ಸ್ಥಳ ಮಹಜರನ್ನು ನನ್ನ ಮತ್ತು ಚಾಸಾ–3ರವರ ಸಮಕ್ಷಮ ಬೆಳಗ್ಗೆ 11.25 ಗಂಟೆಯಿಂದ 12.25 ಗಂಟೆಯವರೆಗೆ ಘಟನಾ ಸ್ಥಳದಲ್ಲಿ ಜರುಗಿಸಿ, ಅದೇ ಸಮಯದಲ್ಲಿ ಮದ್ಯ ತುಂಬಿದ 90 ಎಂ.ಎಲ್.ನ ರಾಜಾವಿಸ್ಕಿ ಎಂದು ಬರೆದಿರುವ 28 ಮದ್ಯದ ಪೌಚುಗಳನ್ನು ಹಾಗೂ ಕಪ್ಪು ಬಣ್ಣದ ಪ್ಲಾಸ್ಟಿಕ್ ಕವರನ್ನು ವಶಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಅದೇ ಸಮಯದಲ್ಲಿ ಕೆಎ–66/ಜೆ–9797 ನಂಬರಿನ ಹೀರೋ ಹೋಂಡ ಸ್ಲೆಂಡರ್ ಬೈಕನ್ನು ವಶಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಅದೇ ಸಮಯದಲ್ಲಿ ನಿಪಿ.3ರಂತೆ ಛಾಯಾಚಿತ್ರವನ್ನು ತೆಗೆದಿರುತ್ತಾರೆ ಎಂದರೆ ಸರಿಯಲ್ಲ. ಈ ಬಗ್ಗೆ ನಾನು ದಿನಾಂಕ 21.05.2025ರಂದು ಪೊಲೀಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಅಲ್ಲಗಳೆದ ಹೇಳಿಕೆಯನ್ನು ನಿಪಿ.6 ಎಂದು

ಗುರುತಿಸಲಾಯಿತು. ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು :- ಆರೋಪಿ ಪರ ವಕೀಲರು ಯಾವುದೇ ಪಾಟೀ ಸವಾಲು ಇರುವುದಿಲ್ಲ ಎಂದು ನುಡಿದಿರುತ್ತಾರೆ.**

**ಮರುವಿಚಾರಣೆಃ ಇರುವುದಿಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

sd/-

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ, ಕಡೂರು